ಕರ್ನಾಟಕ ವಿಧಾನಸಭೆ

ಮಂಗಳವಾರ 2ನೇ ಮೇ 2000 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 9-50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:(ಶ್ರೀ ಎಂ. ವಿ. ವೆಂಕಟಪ್ಪ)ರವರು ಪೀಠವನ್ನು ಅಲಂಕರಿಸಿದ್ದರು.

1. ಮುಖ್ಯಮಂತ್ರಿಗಳಿಗೆ 69ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು.

ಅಧ್ಯಕ್ಷರು : ನಿನ್ನೆಯ ದಿವಸ ಮಾನ್ಯ ಸಭಾನಾಯಕರ ಹುಟ್ಟುಹಬ್ಬ ಇತ್ತು. ಅವರು ಈ ಸಭೆಯಲ್ಲಿ ಇರಲಿಲ್ಲ, ಇದು ನಮ್ಮೆಲ್ಲರಿಗೂ ಗೊತ್ತಿದೆ. ಆದ್ದರಿಂದ ಮಾನ್ಯ ಸಭಾನಾಯಕರು ಕರ್ನಾಟಕ ರಾಜ್ಯಕ್ಕೋಸ್ಕರ ಯವ್ಯಾವ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರಬೇಕೆಂದು ಏನೊಂದು ಮಾರ್ಗಸೂಚಿಯನ್ನು ರೂಪಿಸಿಕೊಂಡಿದ್ದಾರೋ ಅವೆಲ್ಲವನ್ನು ಚೆನ್ನಾಗಿ ಕಾರ್ಯಗತ ಮಾಡುವುದಕ್ಕೆ ಅವರಿಗೆ ದೇವರು ಒಳ್ಳೆಯದು ಮಾಡಲೆಂದು ಹಾರೈಸಿ ಅವರ ಹುಟ್ಟು ಹಬ್ಬಕ್ಕಾಗಿ ನಾನು ಶುಭಾಶಯವನ್ನು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಹುಟ್ಟುಹಬ್ಬಕ್ಕೆ ತಾವು ಶುಭಾಶಯವನ್ನು ಕೋರಿದ್ದೀರಿ. ಅದಕ್ಕೆ ನಾವು ಕೂಡ ತಮ್ಮ ಜೊತೆಯಲ್ಲಿ ಧ್ವನಿಗೂಡಿಸುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಜವಾಬ್ದಾರಿಯನ್ನು ಹೊತ್ತುಕೊಂಡು ಹಾಗೂ ರಾಜ್ಯದ ಬಗ್ಗೆ ಹಿತ ಚಿಂತನೆ ಮಾಡುತ್ತಾ ಇವತ್ತು ಸರ್ಕಾರವನ್ನು ನಡೆಸುತ್ತಿದ್ದಾರೆ. ಇವತ್ತು 68 ವರ್ಷಗಳನ್ನು ಮುಗಿಸಿ 69ನೇ ವರ್ಷಕ್ಕೆ ಅವರು ಪಾದಾರ್ಪಣೆ ಮಾಡಿದ್ದಾರೆ. ಈ ಹಂತದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ಪರವಾಗಿ ಹೃತ್ಪೂರ್ವಕವಾದ ಹುಟ್ಟು ಹಬ್ಬದ ಶುಭಾಶಯಗಳನ್ನು ಸಲ್ಲಿಸುತ್ತೇನೆ, ಹಾಗೆಯೇ, ಈ ಸದನದ ಎಲ್ಲಾ ಶಾಸಕರು ಇದಕ್ಕೆ ಧ್ವನಿಗೂಡಿಸುತ್ತಾರೆಂದು ಹೇಳುತ್ತಾ ಅವರಿಗೆ ದೇವರು ಆಯುರಾರೋಗ್ಯವನ್ನು ನೀಡಿ ಅದನ್ನು ಹೆಚ್ಚಿನ ರೀತಿಯಲ್ಲಿ ಕಾಯ್ದಿರಿಸಿಕೊಂಡು ಹೋಗಲೆಂದು ಆಶಿಸುತ್ತಾ ಈ ರಾಜ್ಯದ ಜನತೆಗೆ ಹೆಚ್ಚಿನ ಒಂದು ನೆರವು ಅವರ ಮೂಲಕ ಸಿಗಲೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ಈ ನಾಡಿನ ಮಾನ್ಯ ಮುಖ್ಯಮಂತ್ರಿಗಳ 69ನೇ ವರ್ಷ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ನಮ್ಮ ಪಕ್ಷದ ಪರವಾಗಿ ಮತ್ತು ನನ್ನ ಪರವಾಗಿ ಅವರಿಗೆ ಅಭಿನಂದನೆಗಳನ್ನು ತಮ್ಮ ಮುಖಾಂತರ ಸಲ್ಲಿಸುತ್ತೇನೆ. ಆಡಳಿತದಲ್ಲಿ ಅಪಾರವಾದ ಅನುಭವವನ್ನು ಹೊಂದಿರತಕ್ಕಂಥ ಅವರು ಈ ನಾಡಿನ ನಾಯಕರಾಗಿದ್ದು, ಈ ರಾಜ್ಯದ ಪ್ರಗತಿಯ ದೃಷ್ಟಿಯಿಂದ ಅವರ ಅನುಭವದ ಸದುಪಯೋಗವಾಗಲೆಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ಇವತ್ತಿನ ದಿವಸ ಒಂದು ಒಳ್ಳೆಯ ಸಂಪ್ರದಾಯವನ್ನು ಮಾನ್ಯ ಎಸ್. ಎಂ. ಕೃಷ್ಣರವರು ಪ್ರಾರಂಭ ಮಾಡಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂಥವರು ಯಾವ ರೀತಿ ಹುಟ್ಟುಹಬ್ಬವನ್ನು ಆಚರಣೆ ಮಾಡಬೇಕು ಎಂಬುದನ್ನು ಅವರು ನಮಗೆಲ್ಲ ತೋರಿಸಿಕೊಟ್ಟಿದ್ದಾರೆ. ಶ್ರೀಯುತರು ತಮ್ಮ ಹುಟ್ಟುಹಬ್ಬವನ್ನು ಒಂದು ದೊಡ್ಡ ಹಬ್ಬದ

ರೀತಿಯಲ್ಲಿ ಆಚರಣೆ ಮಾಡಿಕೊಳ್ಳದೇ ಅವರ ಕುಟುಂಬವರ್ಗದವರ ಜೊತೆಯಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ಆಶೀರ್ವಾದ ಪಡೆಯುವುದರ ಜೊತೆಗೆ ಖಾಸಗಿಯಾಗಿ ಹುಟ್ಟುಹಬ್ಬವನ್ನು ಆಚರಣೆ ಮಾಡಿಕೊಂಡಿದ್ದಾರೆ. ಈ ರೀತಿಯಾದ ಒಂದು ಒಳ್ಳೆಯ ಸಂಪ್ರದಾಯವನ್ನು ಅವರು ಆಚರಣೆಗೆ ತಂದಿದ್ದಾರೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಬೇರೆಯವರಿಗೂ ಸಹ ಮಾದರಿಯಾಗುವ ರೀತಿಯಲ್ಲಿ ಈ ಆಚರಣೆಯನ್ನು ಮಾಡಿದ್ದಾರೆ. ಅನೇಕ ಕನಸುಗಳನ್ನು ಮತ್ತು ಆಸೆಗಳನ್ನು ಇಟ್ಟುಕೊಂಡಿರತಕ್ಕಂಥ ಮುಖ್ಯ ಮಂತ್ರಿಗಳಾಗಿದ್ದಾರೆ. ಅವರಿಗೆ ಇರತಕ್ಕಂಥ ಆಡಳಿತಾತ್ಮಕ ಅನುಭವದಿಂದ ಎಲ್ಲಾ ಕಾರ್ಯಗಳು ಕಾರ್ಯಾಚರಣೆಗೆ ಬರಬೇಕೆಂದು ಆಶಿಸುತ್ತಾ, ಈ ಕಾರ್ಯದಲ್ಲಿ ಅವರಿಗೆ ಯಶಸ್ಸು ಸಿಗಲಿ ಮತ್ತು ಮನಸ್ಸಿಗೆ ಶಾಂತಿ ದೊರೆಯಲೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಒಂದು ಮುಖ್ಯವಾದ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಏನೆಂದರೆ ಇನ್ನು ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳು ನಡೆಯಬೇಕಾಗಿದೆ. ಆದ್ದರಿಂದ ಈ ಸದನದಲ್ಲಿ ಸರ್ಕಾರಿ ಕಾರ್ಯಕಲಾಪಗಳು ಪ್ರಾರಂಭವಾಗುವ ಮೊದಲೇ ಈ ವಿಷಯವನ್ನು ಪ್ರಸ್ತಾಪ ಮಾಡುವುದರ ಅವಶ್ಯಕತೆ ಇದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿದನಂತರ ತಾವು ಆ ವಿಷಯವನ್ನು ಪ್ರಸ್ತಾಪ ಮಾಡಬಹುದು ಏನೂ ತೊಂದರೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿನ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕಳೆದ 29ನೇ ತಾರೀಖಿನಂದು ಚುನಾವಣಾ ಆಯೋಗ ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಯನ್ನು ನಡೆಸುತ್ತೇವೆಂದು ಘೋಷಣೆ ಮಾಡಿದೆ. ಈ ವಿಷಯ 30ನೇ ತಾರೀಖಿನ ಪತ್ರಿಕೆಗಳಲ್ಲಿ ಬಂದಿದೆ. 10ನೇ ತಾರೀಖು ನೋಟಿಫಿಕೇಶನ್ ಹೊರಡಿಸುತ್ತೇವೆ ಮತ್ತು ಅವತ್ತಿನ ದಿವಸದಿಂದಲೇ ಎಲೆಕ್ಷನ್ ಪ್ರೋಸೆಸ್ ಪ್ರಾರಂಭವಾಗಲಿದೆ ಎಂದು ಹೇಳಿದ್ದಾರೆ. ಆದರೆ ಕ್ಯಾಲೆಂಡರ್ ಆಫ್ ಈವೆಂಟ್ಸ್ ಪ್ರಕಾರ ಅವರು 29ನೇ ತಾರೀಖಿನ ದಿವಸ ಪ್ರಕಟಣೆ ಮಾಡಿದ್ದಾರೆ. ಇಲ್ಲಿ ಇರತಕ್ಕ ಬಹಳ ಮುಖ್ಯವಾದಂಥ ವಿಷಯ ಎಂದರೆ, ಚುನಾವಣಾ ಆಯೋಗ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹೇಳಿಕೆ ಕೊಡತಕ್ಕಂಥ ಸಂದರ್ಭದಲ್ಲಿ 10ನೇ ತಾರೀಖು ಚುನಾವಣೆ ಪ್ರಕ್ರಿಯೆಗಳು ಪ್ರಾರಂಭವಾಗುತ್ತದೆ ಆದರೆ ಚುನಾವಣಾ ನೀತಿ ಸಂಹಿತೆ 29ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ. ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ. ಆದ್ದರಿಂದ ನಾವು ಇದನ್ನು ಗಮನಿಸಬೇಕಾದುದು ಬಹಳ ಮುಖ್ಯವಾಗಿದೆ. ಕಳೆದ ಒಂದು ತಿಂಗಳಿಂದ ಈ ಸದನ ನಡೆಯುತ್ತಿದ್ದು, ಈ ತಿಂಗಳ 5ನೇ ತಾರೀಖಿನವರೆಗೆ ಮುಂದುವರೆಯುತ್ತದೆ. ಪ್ರತಿ ವರ್ಷ 100 ದಿವಸಗಳ ಕಾಲ ಸದನ ನಡೆಯಬೇಕೆಂಬುದು ನಮ್ಮ ಪ್ರತಿ ಪಕ್ಷದ ಮತ್ತು ಎಲ್ಲಾ ಪಕ್ಷದ ಅಭಿಲಾಷೆ ಮೊದಲಿನಿಂದಲೂ ಸಹ ಇದೆ. ಈ ಅಧಿವೇಶನವನ್ನು ಮುಂದಕ್ಕೆ ಹಾಕಬೇಕು ಎನ್ನತಕ್ಕಂಥ ಬಯಕೆ ನಮ್ಮಲ್ಲಿ ಯಾರಿಗೂ ಇಲ್ಲವೆಂದು ನಾನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಚುನಾವಣೆ ನೀತಿ ಸಂಹಿತೆ ಪ್ರಕಾರ ಈ ಸದನವನ್ನು 5ನೇ ತಾರೀಖಿನವರೆಗೆ ನಡೆಸುವ ಬಗ್ಗೆ ಸೂಕ್ತತೆ ಇದೆಯೇ ಎಂಬುದರ ಬಗ್ಗೆ ನಾವು ಮೊದಲು ಚಿಂತನೆ ಮಾಡಬೇಕಾಗಿದೆ.

ಶ್ರೀ ಎಚ್.ಕೆ. ಪಾಟೀಲ್ : ತಾವು ಮೊದಲು ಪ್ರಸ್ತಾಪ ಮಾಡಿರತಕ್ಕಂಥ ವಿಷಯದ ಬಗ್ಗೆ ನಾವು ಮಾತನಾಡಬೇಕಾಗಿರುವುದರಿಂದ ಆ ವಿಷಯ ಮುಗಿದ ಮೇಲೆ ಈ ವಿಷಯವನ್ನು ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಜಗದೀಶ್‌ಶೆಟ್ಟರು ಮತ್ತು ಮಾನ್ಯ ಪಿ.ಜಿ.ಆರ್.ಸಿಂಧ್ಯಾ ಅವರು ಪ್ರಸ್ತಾಪ ಮಾಡಿರತಕ್ಕಂಥದ್ದು ಬಹಳ ಗಹನವಾದ ವಿಚಾರವಾಗಿದೆ. ಈಗ ತಾವು ಮತ್ತೆ ಮುಂದುವರಿದ ವಿಷಯದಿಂದ ಹಿಂದುವರಿದು ಆ ವಿಷಯವನ್ನು ಪ್ರಸ್ತಾಪ ಮಾಡುವುದು ಅಷ್ಟು ಸಾಧುವಲ್ಲವೆಂದು ಬಹಳ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯ ಸಹೋದ್ಯೋಗಿಗಳ ಪರವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ 68ನೇ ವರ್ಷದಿಂದ 69ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ತಮ್ಮೆ ಲ್ಲರ ಜೊತೆಯಲ್ಲಿ ನಾನು ಕೂಡ ಧ್ವನಿಗೂಡಿಸುತ್ತಾ ಅವರಿಗೆ ಆಯುರಾರೋಗ್ಯ ಮತ್ತು ಅಧಿಕಾರವೆಲ್ಲವೂ ಕೂಡ ಹೆಚ್ಚು ಹೆಚ್ಚಾಗಿ ಬರಲೆಂದು ಮತ್ತು ಕರ್ನಾಟಕ ರಾಜ್ಯದ ಜನತೆಯ ಸೇವೆ ಮಾಡುವುದಕ್ಕೆ ಹೆಚ್ಚಿನ ಶಕ್ತಿ ಬರಲೆಂದು ಅವರು ಹೆಚ್ಚು ಆರೋಗ್ಯವಂತರಾಗಿ ಕೆಲಸ ಮಾಡಲೆಂದು ಹಾರೈಸುತ್ತೇನೆ.

(2) ಅಧ್ಯಕ್ಷರ ಅಪ್ಪಣೆ ಮೇರೆಗೆ ವಿಷಯ : ಚುನಾವಣಾ ಆಯೋಗವು ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯತ್ ಚುನಾವಣೆ ಘೋಷಿಸಿರುವುದರಿಂದ ಸದನವನ್ನು ಮುಂದುವರಿಸದಿರವು ಒತ್ತಾಯ :-

+ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಯನ್ನು ನಡೆಸುವ ಬಗ್ಗೆ ಅಧಿಸೂಚನೆ ಯನ್ನು ಹೊರಡಿಸಿರುವಂಥ ಸಂದರ್ಭದಲ್ಲಿ ಈ ಸದನವನ್ನು 5ನೇ ತಾರೀಖಿನವರೆಗೆ ಮುಂದು ವರಿಸಿಕೊಂಡು ಹೋಗವು ಸೂಕ್ತತೆ ಬಗ್ಗೆ ನಾವೆಲ್ಲರೂ ಸಹ ಚಿಂತನೆ ಮಾಡಬೇಕಾಗಿದೆ. ಕಳೆದ ಒಂದು ತಿಂಗಳಿಂದ ಅಧಿವೇಶನ ನಡೆದುಕೊಂಡು ಬಂದಿದ್ದು, ಇಲ್ಲಿ ಹಲವಾರು ವಿಷಯಗಳ ಮೇಲೆ ಚರ್ಚೆಯಾಗಿದೆ. ಇನ್ನು ನಾಲ್ಕು ದಿವಸಗಳು ಮಾತ್ರ ಅಧಿವೇಶನ ಇದೆ. ಆದ್ದರಿಂದ ಚುನಾವಣೆ ಆಯೋಗದ ನೀತಿ ಸಂಹಿತೆ ಪ್ರಕಟಣೆ ಆದಮೇಲೆ ಸದನ ನಡೆಸುವುದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ ಏಕೆಂದರೆ, ಇಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇವೆ ಹಾಗೆಯೇ ಪ್ರಶ್ನೋತ್ತರ ವೇಳೆಯಲ್ಲಿ ಮತ್ತು ಶೂನ್ಯವೇಳೆಯಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇವೆ. ಸರ್ಕಾರದವರು ಕೆಲವೊಂದು ವಿಷಯಗಳ ಮೇಲೆ ಸ್ಪಷ್ಟತೆ ಕೊಡಬೇಕಾಗುತ್ತದೆ ಮತ್ತು ಕೆಲವೊಂದು ಪಾಲಿಸಿ ಡಿಸಿಷನ್ ಹಾಗೂ ಕೆಲವು ವಿಷಯಗಳ ಬಗ್ಗೆ ಭರವಸೆಯನ್ನು ಕೊಡಲೇಬೇಕಾಗುತ್ತದೆ. ಚುನಾವಣಾ ನೀತಿ ಸಂಹಿತೆಯಲ್ಲಿ ಚುನಾವಣಾ ಆಯೋಗ ಹೇಳಿರುವ ಪ್ರಕಾರ ಸರ್ಕಾರ ವರ್ಗಾವಣೆಗಳನ್ನು ಕೂಡ ಮಾಡಬಾರದು, ಹಾಗೆಯೇ ಹಿಂದಿನ ದಿನಾಂಕವನ್ನು ಹಾಕಿ ವರ್ಗಾವಣೆ ಮಾಡುವುದು ಸಹ ಆಗಬಾರದು. ಚುನಾವಣಾ ನೀತಿ ಸಂಹಿತೆ ಪ್ರಕಟಣೆ ಆದ ಮೇಲೆ ಸರ್ಕಾರ ಮತದಾರರಿಗೆ ಭರವಸೆಯನ್ನು ಕೊಡಬಾರದೆಂದು ಚುನಾವಣಾ ಆಯೋಗ ರಿಸ್ಟ್ರಿಕ್ಷನ್ ಹಾಕಿರುವುದು ಕ್ಲಿಯರಾಗಿದೆ. ಇಂತಹ ಸಂದರ್ಭದಲ್ಲಿ ಸದನವನ್ನು ಮುಂದುವರಿಸಿಕೊಂಡು ಹೋದರೆ ಹೇಗೆ? ಏಕೆಂದರೆ ಸರ್ಕಾರ ಈಗಾಗಲೇ ನಾಲ್ಕು ತಿಂಗಳವರೆಗೆ ಲೇಖಾನುದಾನವನ್ನು ತೆಗೆದುಕೊಂಡಿದೆ. ಆದ್ದರಿಂದ ಸದನವನ್ನು ಮುಂದೂಡಿದರೆ ಯಾವುದೇ ರೀತಿಯ